ಚಿಕ್ಕೋಡಿ ವಿಭಾಗದ ರಸ್ತೆ ಕಾಮಗಾರಿ

1231(1441) ಶ್ರೀ ಕಟ್ಟೀಮನಿ ಮನೋಹರ ಶಿವಪುತ್ರ(ಚಿಕ್ಕೋಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂಕೇಶ್ವರ-ಜೇವರ್ಗಿ ಎಸ್.ಎಸ್:12ರ ರಸ್ತೆ ಕಾಮಗಾರಿ ಮಂದಗತಿಯಲ್ಲಿ ಸಾಗಿರುವುದಕ್ಕೆ ಕಾರಣವೇನು?

ಆ) ಈ ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಕಾಮಗಾರಿ ಪ್ರಗತಿಯಲ್ಲಿದೆ.

ಆ) ಇದೆ.

ಇ)

ಕ್ರಮ ಸಂಖ್ಯೆ	ಎಲ್ಲಿವರೆ	ಪ್ರಾರಂಭದ ದಿನಾಂಕ ಪೂರ್ಣಗೊಳ್ಳುವ ದಿನಾಂಕ
1.	ಜೇವರ್ಗಿಯಿಂದ ಮಾರಟಗಿ	ಕಾಮಗಾರಿ ಪ್ರಗತಿಯಲ್ಲಿದೆ.
2.	ಮರಟಗಿ-ಸಿಂಧಗಿ	ಟೆಂಡರ್ ಪ್ರಕ್ರಿಯೆಯಲ್ಲಿದೆ.
3.	ಬಿಜಾಪುರ-ತಿಕೋಟ ಮೇಲ್ದರ್ಜೆಗೇರಿಸುವುದು	19-2-2002 ಡಿಸೆಂಬರ್ 2003
4.	ತಿಕೋಟ-ಅಥಣಿ ಪುನಃಶ್ಚೇತನಗೊಳಿಸುವುದು	19-2-2002 ಜೂನ್ 2003
5.	ಅಥಣಿ-ಶೇಡ್‌ಬಾಳ್ ಪುನಃಶ್ಚೇತನಗೊಳಿಸುವುದು	19-2-2002 ಮೇ 2003
6.	ಶೇಡ್‌ಬಾಳ್-ಸಂಕೇಶ್ವರ ಪುನಃಶ್ಚೇತನಗೊಳಿಸುವುದು	19-2-2003 ಡಿಸೆಂಬರ್ 2003

ಚಿಕ್ಕೋಡಿ ಜಿಲ್ಲೆಯ ರಚನೆ

1232(1834) ಶ್ರೀ ಕಟ್ಟೀಮನಿ ಮನೋಹರ ಶಿವಪುತ್ರ (ಚಿಕ್ಕೋಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕೋಡಿ ನಗರ ಜಿಲ್ಲಾ ಕೇಂದ್ರಕ್ಕೆ ಸಂಬಂಧಿಸಿದ ಎಲ್ಲಾ ಅರ್ಹತೆಯನ್ನು ಹೊಂದಿದ್ದು, ಶೇಕಡಾ 90ರಷ್ಟು ಜಿಲ್ಲಾ ಹೆಚ್ಚುವರಿ ಇಲಾಖೆಗಳು ಇಲ್ಲಿಯೇ ಕೆಲಸವನ್ನು ನಿರ್ವಹಿಸುತ್ತಿದ್ದರೂ, ಜಿಲ್ಲೆಯಾಗಿ ಪರಿವರ್ತಿಸಲು ಸರ್ಕಾರಕ್ಕಿರುವ ತೊಂದರೆ ಏನು?

ಆ) ತುರ್ತಾಗಿ ಜಿಲ್ಲೆಯನ್ನು ರಚಿಸುವ ವಿಚಾರ ಸರ್ಕಾರಕ್ಕೆ ಇದೆಯೇ?

ಇ) ಚಿಕ್ಕೋಡಿಯನ್ನು ಜಿಲ್ಲೆಯಾಗಿ ಯಾವಾಗ ಎಷ್ಟು ದಿನಗಳಲ್ಲಿ ಮಾಡಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):